





ಇವತ್ತು ಬೆಳಗ್ಗೆ ನಿನ್ನೆಯ ಧಗೆಯನ್ನು ಅಳಿಸಿಹಾಕುವ ಹಾಗೆ ಮೆಲ್ಲಗೆ ಗಾಳಿ ಬೀಸುತ್ತಿತ್ತು. ಹತ್ತು ಗಂಟೆಯಾದರೂ ಹೆಚ್ಚು ಬಿಸಿಲಿರಲಿಲ್ಲ. ಮೋಡಗಳಿಲ್ಲದ ಆಕಾಶ ಕಡು ನೀಲಿಯಾಗಿತ್ತು. ಗಿಡಮರಗಳು ಆಗಷ್ಟೇ ಸುರಿದ ಮಳೆಯನ್ನು ಹೀರಿಕೊಂಡಿರುವಂತೆ ಹಸಿರಿನಿಂದ ನಳನಳಿಸುತ್ತಿದ್ದವು. ಅಂಗಡಿ ಮುಂಗಟ್ಟುಗಳು, ಸರ್ಕಾರಿ ಕಚೇರಿಗಳು, ಐಟಿಯಂಥ ಕಂಪನಿಗಳ ದೊಡ್ಡ ದೊಡ್ಡ ಕಟ್ಟಡಗಳು, ಭಾರೀ ಕುಳಗಳ ಬಂಗಲೆಗಳು, ಉದ್ದಕ್ಕೂ ಸಣ್ಣ ದೊಡ್ಡ ಸಾಲುಮರಗಳು, ಹಾಯಾಗಿ ನಿಂತುಕೊಂಡೋ ಮಲಗಿಕೊಂಡೋ ಇದ್ದ ಹಸು ಕರುಗಳು, ಕೂತಲ್ಲಿ ಕೂರದೆ ಅಲೆಯುವ ನಾಯಿಗಳು ಇರುವ ಮುಖ್ಯ ರಸ್ತೆಯಲ್ಲಿ ಮಹಾ ಮೆರವಣಿಗೆ ಅಂದರೆ ಕೇಳಬೇಕೆ? ಆಳುವ ಪಕ್ಷದ ಬಾವುಟಗಳು ಬೀದಿ ದೀಪಗಳ ಮೇಲೆ, ಸರ್ಕಾರಿ ಕಚೇರಿಗಳ ಗೇಟುಗಳ ಮೇಲೆ, ಕೆಲವು ಎತ್ತರದ ಕಟ್ಟಡಗಳ ಮೇಲೆ ರಾರಾಜಿಸುತ್ತಿದ್ದವು. ಆಗಲೇ ಕೆಲವರು ಪೊಲೀಸರು ಲಾಠಿಯನ್ನೂ ಇನ್ನು ಕೆಲವರು ಬಂದೂಕನ್ನೂ ಹಿಡಿದುಕೊಂಡು ಅಲ್ಲಲ್ಲಿ ನಿಂತುಬಿಟ್ಟಿದ್ದರು. ವಿರೋಧ ಪಕ್ಷದ ಅಭ್ಯರ್ಥಿಯನ್ನೂ ಮೀರಿಸುವಂಥ ರ್‍ಯಾಲಿ ನಡೆಸಬೇಕೆಂದು ತೀರ್ಮಾನಿಸಿದ್ದವರು ಭದ್ರಪ್ಪನವರು. ಇನ್ನೂ ಅಧಿಕಾರದಲ್ಲಿರುವ ಮಂತ್ರಿಯ ಮೆರವಣಿಗೆಯೆಂದ ಮೇಲೆ ಜನಜಂಗುಳಿ, ವಾಹನ ದಟ್ಟಣೆ ಸಹಜವೇ.

ನಮಗೆ ನಮ್ಮ ಕ್ಷೇತ್ರದ ಶಾಸಕ ನಾಗಯ್ಯನವರ ಬಲಗೈ ಎಂದರೆ ರಂಗಧಾಮಯ್ಯನವರೇ ಎಂದು ಗೊತ್ತುಂಟಲ್ಲ. ಅವರೇ ಕಂತ್ರಾಟು ಹಿಡಿದಿದ್ದರಿಂದ ಮಹೇಶಿ, ರುದ್ರಣ್ಣ ಮುಂತಾದ ಪಟಾಲಂ ಬೆಳಗ್ಗಿನಿಂದಲೇ ಒಂದು ದೊಡ್ಡ ಟ್ರಕ್ಕಿಗೆ ಅಲ್ಲಲ್ಲಿ ಬಾಳೆಕಂದುಗಳನ್ನು ಬಿಗಿದು, ಮಾವಿನ ತೋರಣ ಕಟ್ಟಿ, ಹೂವಿನ ಅಲಂಕಾರ ಮಾಡಿ, ಎರಡು ಕಡೆ ಎರಡೆರಡು ಸ್ಪೀಕರುಗಳನ್ನು ಬಿಗಿದು, ಮಂತ್ರಿ ಭದ್ರಪ್ಪನವರ ಭಾರಿ ಕಟೌಟನ್ನು ನಿಲ್ಲಿಸಿ, ದೊಡ್ಡದೊಂದು ಬ್ಯಾನರು ಹಾಕುವವರೆಗೂ ಅಂಥ ಜನಜಂಗುಳಿಯೇನಿರಲಿಲ್ಲ. ನಮ್ಮ ಶಾಸಕ ನಾಗಯ್ಯನವರ ಮನೆಗೆ ಸ್ವಲ್ಪ ದೂರದಲ್ಲಿ ಅಲಂಕಾರಗೊಂಡು ಸಿದ್ಧವಾಗಿದ್ದ ಟ್ರಕ್ಕಿಗೆ ಒಂದೆರಡು